ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ದಾವಣಗೆರೆ ವಿಭಾಗ : ದಾವಣಗೆರೆ

Traffic Section : ಸಂಚಾರ ಶಾಖೆ

ಸಂಖ್ಯೆ.ಕರಾಸಾ/ದಾವಿ/ಸಂಚಾರ/ವಾಣಿಜ್ಯ/2054/2016-17 ದಿನಾಂಕ : 16/08/2016

# "ಸಂಧಾನ ಪ್ರಕಟಣೆ ಸಂಖ್ಯೆ : 02/2016-17"

ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿನ ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಖಾಲಿಯಾಗಲಿರುವ ಇರುವ ವಾಣಿಜ್ಯ ಮಳಿಗೆಗಳಿಗೆ ಹಾಗೂ ತೆರೆದ ಸ್ಥಳಗಳಿಗೆ ಪರವನಗಿದಾರರನ್ನು ಆಯ್ಕೆ ಮಾಡಲು ಆಸಕ್ತರನ್ನು ದಿನಾಂಕ : 08-09-2016 ರಂದು ಸಮಯ 15.00 ಗಂಟೆಗೆ ಮಾತುಕತೆಯ ಮೂಲಕ ನೀಡಲು ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಪರವಾನಗಿ ಶುಲ್ಕದ ಮೇಲೆ ಶೇಖಡ 10% ರಷ್ಟು ಪ್ರತಿ ವರ್ಷ ಹೆಚ್ಚಿಸಲಾಗುವುದು. ಅವಧಿ ಮುಗಿದ ಬಳಿಕ ಹೊಸದಾಗಿ ಇ-ಹರಾಜು/ಇ-ಟೆಂಡರ್ ಕರೆಯಲಾಗುವುದು. ಮಾತುಕತೆಯಲ್ಲಿ ಆಯ್ಕೆಯಾದ ಆಸಕ್ತರು ಕರ್ನಾಟಕ ಸ್ಟಾಂಪ್ ಕಾಯ್ದೆಯನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು.

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ ; 492/2001 ರ ಪ್ರಕಾರ**

| ಕ್ರ. ಸಂ | ಬಸ್ ನಿಲ್ದಾಣದ ಹೆಸರು | ಮಳಿಗೆಯ ಹೆಸರು | ವಿಸ್ತೀರ್ಣ (ಚ.ಅ) | ಮಾದರಿ | ಅವಧಿ | ಮಿತಿವ್ಯಯ ಮಾಸಿಕ ಶುಲ್ಕ (ರೂ.ಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಖಾಲಿಯಾಗುವ ದಿನಾಂಕ |
|---|---|---|---|---|---|---|---|---|
| 1 | ದಾವಣಗೆರೆ | ಮ.ಸಂ-10 ವಸತಿ ಗೃಹ | 6477 | ಶಾಶ್ವತ | 10 ವರ್ಷ | 96,889 | 2,90,667 | 05-09-2016 |
| 2 | ಭದ್ರಾವತಿ | ವಸತಿ ಗೃಹ | 569.41 | ಶಾಶ್ವತ | 10 ವರ್ಷ | 3,994 | 11,982 | ಖಾಲಿ |
| 3 | ಸಾಗರ | ಕರೆನ್ಸಿ ಅಂಗಡಿ / ದೂರವಾಣಿ ಕೇಂದ್ರ (ಅಂಗವಿಕಲರಿಗೆ ಮಾತ್ರ) | 4x3 | ತೆರೆದ | 3 ವರ್ಷ | 424 | 1,272 | ಖಾಲಿ |
| 4 | ಜಗಳೂರು | ಮ.ಸಂ-03 ಜನರಲ್ ಸ್ಟಾಲ್ | 125 | ಶಾಶ್ವತ | 5 ವರ್ಷ | 2,211 | 6,633 | ಖಾಲಿ |
| 5 | ಹರಿಹರ | ಎ.ಟಿ.ಎಂ | 10x10 | ತೆರೆದ | 5 ವರ್ಷ | 13,726 | 41,178 | ಖಾಲಿ |
| 6 | ಹರಪನಹಳ್ಳಿ | ಎ.ಟಿ.ಎಂ | 10x10 | ತೆರೆದ | 5 ವರ್ಷ | 4,000 | 12,000 | ಖಾಲಿ |
| 7 | ತೆಲಗಿ | ಎ.ಟಿ.ಎಂ | 10x10 | ತೆರೆದ | 5 ವರ್ಷ | 3,000 | 9,000 | ಖಾಲಿ |
| 8 | ಹಿರಿಯೂರು | ಎ.ಟಿ.ಎಂ | 10x10 | ತೆರೆದ | 5 ವರ್ಷ | 6,300 | 18,900 | ಖಾಲಿ |
| 9 | ಮಲೇಬೆನ್ನೂರು | ಎ.ಟಿ.ಎಂ | 10x10 | ತೆರೆದ | 5 ವರ್ಷ | 3,000 | 9,000 | ಖಾಲಿ |
| 10 | ಚಿಗಟೇರಿ | ಎ.ಟಿ.ಎಂ | 10x10 | ತೆರೆದ | 5 ವರ್ಷ | 3,000 | 9,000 | ಖಾಲಿ |
| 11 | ಸಿರಿಗೆರೆ | ಎ.ಟಿ.ಎಂ | 10x10 | ತೆರೆದ | 5 ವರ್ಷ | 3,000 | 9,000 | ಖಾಲಿ |
| 12 | ಹೊಳಲೂರು | ಎ.ಟಿ.ಎಂ | 10x10 | ತೆರೆದ | 5 ವರ್ಷ | 3,000 | 9,000 | ಖಾಲಿ |
| 13 | ಸೊರಬ | ಎ.ಟಿ.ಎಂ | 10x10 | ತೆರೆದ | 5 ವರ್ಷ | 4,000 | 12,000 | ಖಾಲಿ |
| 14 | ಜಗಳೂರು | ಎ.ಟಿ.ಎಂ | 10x10 | ತೆರೆದ | 5 ವರ್ಷ | 4,000 | 12,000 | ಖಾಲಿ |

| | | | | | | | | |
|---|---|---|---|---|---|---|---|---|
| 15 | ಜಗಳೂರು | ಉಪಹಾರ ಗೃಹ | 1020 | ಶಾಶ್ವತ | 5 ವರ್ಷ | - | 36,715 | ಖಾಲಿ |
| 16 | ಹೊನ್ನಾಳಿ | ಮ.ಸಂ-06 ಜನರಲ್ ಸ್ಟಾಲ್ (ಮೊದಲನೆ ಮಹಡಿ) | 1438.07 | ಶಾಶ್ವತ | 5 ವರ್ಷ | - | 51,687 | ಖಾಲಿ |
| 17 | ಹೊನ್ನಾಳಿ | ಮ.ಸಂ-07 ಜನರಲ್ ಸ್ಟಾಲ್ (ಮೊದಲನೆ ಮಹಡಿ) | 183.22 | ಶಾಶ್ವತ | 5 ವರ್ಷ | - | 6,588 | ಖಾಲಿ |
| 18 | ತೆಲಗಿ | ಉಪಹಾರ ಗೃಹ | 769.55 | ಶಾಶ್ವತ | 5 ವರ್ಷ | - | 27,500 | ಖಾಲಿ |
| 19 | ತೆಲಗಿ | ಮ.ಸಂ-01 ಜನರಲ್ ಸ್ಟಾಲ್ | 125.67 | ಶಾಶ್ವತ | 5 ವರ್ಷ | - | 4,050 | ಖಾಲಿ |
| 20 | ಭರಮಸಾಗರ | ಮ.ಸಂ-04 ಜನರಲ್ ಸ್ಟಾಲ್ | 115 | ಶಾಶ್ವತ | 5 ವರ್ಷ | - | 3,955 | ಖಾಲಿ |
| 21 | ಸೊರಬ | ಉಪಹಾರ ಗೃಹ | 1021.98 | ಶಾಶ್ವತ | 5 ವರ್ಷ | - | 38,190 | ಖಾಲಿ |
| 22 | ಸೊರಬ | ಲಗೇಜ್ ರೂಂ | 175.49 | ಶಾಶ್ವತ | 5 ವರ್ಷ | - | 6,560 | ಖಾಲಿ |
| 23 | ಸೊರಬ | ಮ.ಸಂ-01 ಜನರಲ್ ಸ್ಟಾಲ್ | 181.95 | ಶಾಶ್ವತ | 5 ವರ್ಷ | - | 6,800 | ಖಾಲಿ |
| 24 | ಸೊರಬ | ಮ.ಸಂ-02 ಜನರಲ್ ಸ್ಟಾಲ್ | 268.45 | ಶಾಶ್ವತ | 5 ವರ್ಷ | - | 10,035 | ಖಾಲಿ |
| 25 | ಸೊರಬ | ಮ.ಸಂ-01 ಜನರಲ್ ಸ್ಟಾಲ್ (ಮೊದಲನೆ ಮಹಡಿ) | 661 | ಶಾಶ್ವತ | 5 ವರ್ಷ | - | 22,625 | ಖಾಲಿ |
| 26 | ಸೊರಬ | ಮ.ಸಂ-02 ಜನರಲ್ ಸ್ಟಾಲ್ (ಮೊದಲನೆ ಮಹಡಿ) | 671 | ಶಾಶ್ವತ | 5 ವರ್ಷ | - | 22,958 | ಖಾಲಿ |

ಸದರಿ ಮಳಿಗೆಯನ್ನು ನಡೆಸಲು ಆಸಕ್ತರು, ನಿಗದಿ ಪಡಿಸಿದ ಇ.ಎಂ.ಡಿ ಮೊತ್ತಕ್ಕೆ ಡಿ.ಡಿ ಯನ್ನು 'Divisional Controller K.S.R.T.C Davanagere' ಇವರ ಹೆಸರಿಗೆ ಪಡೆದು, ಸದರಿ ಡಿ.ಡಿ ಯೊಂದಿಗೆ ತಮ್ಮ ಗುರುತಿನ ಚೀಟಿ ಮತ್ತು ಮನವಿ ಪತ್ರದೊಂದಿಗೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ಇವರಲ್ಲಿ ದಿನಾಂಕ: 08-09-2016 ರಂದು ಸಮಯ 15.00 ಗಂಟೆಗೆ ನಡೆಯಲಿರುವ ಸಂಧಾನದಲ್ಲಿ ಭಾಗವಹಿಸಿ ಸಂಸ್ಥೆಯ ನಿಯಮಗಳನ್ನು ಪಾಲಿಸಿ ಪರವಾನಗಿದಾರರಾಗಿ ಆಯ್ಕೆಯಾಗಬಹುದಾಗಿರುತ್ತದೆ. ಸಂಸ್ಥೆಯ ನಿಯಮಾವಳಿಗಳ ಬಗ್ಗೆ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯ ಕಛೇರಿಯಿಂದ ಪಡೆದು ಸಂಧಾನದಲ್ಲಿ ಭಾಗವಹಿಸುವುದು.

ಸದರಿ ಮಳಿಗೆಗಳಿಗೆ ಆಸಕ್ತರು ಮಾತುಕತೆಗೆ ಕರೆದಿರುವ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯ ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ-577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕಿಸುವ ದೂರವಾಣಿ ಸಂಖ್ಯೆ :- 7760990452, 7760990461

ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ
ದಾವಣಗೆರೆ ವಿಭಾಗ : ದಾವಣಗೆರೆ

<u>ಪ್ರತಿಯನ್ನು ವಂದನೆಗಳೊಂದಿಗೆ :-</u>

1. ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ ಮತ್ತು ಬೆ.ಮ.ಸಾ.ಸಂಸ್ಥೆ ಕೇಂದ್ರ ಕಛೇರಿ, ಹುಬ್ಬಳ್ಳಿ, ಕಲಬುರಗಿ ಮತ್ತು ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ ಮತ್ತು ಬೆ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹೆಚ್ಚಿನ ಪ್ರತಿಗಳನ್ನು ಸಾರ್ವಜನಿಕರ ಅವಗಹಾನೆಗಾಗಿ ಮುಖ್ಯ ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಅಂಟಿಸಲು ಕೋರಿದೆ.
4. ಸಹಾಯಕ ಕಾರ್ಯ ನಿರ್ವಾಹಕ ಅಧಿಕಾರಿ, ಭದ್ರತಾ ಮತ್ತು ಜಾಗೃತಾಧಿಕಾರಿ ಮತ್ತು ಸಹಾಯಕ ಲೆಕ್ಕಾಧಿಕಾರಿ, ಕ.ರಾ.ರ.ಸಾ.ನಿಗಮ ದಾವಣಗೆರೆ ವಿಭಾಗ ರವರ ಮಾಹಿತಿಗಾಗಿ ದಿನಾಂಕ: 08-09-2016 ರಂದು 15.00 ಗಂಟೆಗೆ ಸಂಧಾನ ಸಭೆಗೆ ಹಾಜರಾಗುವುದು.
5. ಸಹಾಯಕ ಆಡಳಿತಾಧಿಕಾರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ ರವರಿಗೆ ಕಳುಹಿಸುತ್ತಾ ಸದರಿ ಪ್ರಕಟಣೆಯನ್ನು ವಿಭಾಗೀಯ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಈ ಮೂಲಕ ತಿಳಿಸಿದೆ.
6. ಘಟಕ ವ್ಯವಸ್ಥಾಪಕರು, ದಾವಣಗೆರೆ/ಶಿವಮೊಗ್ಗ/ಚಿತ್ರದುರ್ಗ/ಹರಿಹರ/ಭದ್ರಾವತಿ/ಸಾಗರ/ಹರಪನಹಳ್ಳಿ/ಚಳ್ಳಕೆರೆ ಮತ್ತು ಹೊನ್ನಾಳಿ ಘಟಕ ರವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸದರಿ ಪ್ರಕಟಣೆಯನ್ನು ನಿಲ್ದಾಣದ ಸೂಚನಾ ಫಲಕದಲ್ಲಿ ಪ್ರಕಟಿಸಿ ಸಾರ್ವಜನಿಕ ಗಮನಕ್ಕೆ ತರುವುದು ಹಾಗೂ ಹೆಚ್ಚಿನ ಪ್ರಚಾರ ಮಾಡುವುದು.

**ಸೂಚನೆಗಳು:-**

1. ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ. 10 % ರಷ್ಟು ಹೆಚ್ಚಾಗುವುದು.
2. ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ ಪದಾರ್ಥ ಸಾಮಾಗ್ರಿ, ನೀರಿನ ಪೊಟ್ಟಣ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ದಿಷ್ಟಪಡಿಸಿದ ಬೆಲೆಗೆ **ಮಾರಾಟ** ಮಾಡುವುದು.
3. ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32 ಎ (ಎ) (111) ರಲ್ಲಿ ಪರಿಷ್ಕೃತ ಸ್ಟಾಂಪ್ ಆಕ್ಟ್ ನಂ: 8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ ಹಾಗೂ ಕೂಡಲೇ ವ್ಯವಹಾರ ಪ್ರಾರಂಭಿಸಬೇಕಾಗಿರುತ್ತದೆ.
4. ಆಯ್ಕೆ ಆದ ಪರವಾನಗಿದಾರರು ತಾವು ಸಲ್ಲಿಸಿರುವ ಇ.ಎಂ.ಡಿ ಹಣವನ್ನು ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ ಪರವಾನಿಗೆ ಶುಲ್ಕದ ಆರು (06) ಮತ್ತು ಮೂರು (03) ತಿಂಗಳ ಹಣವನ್ನು ಭದ್ರತಾ ಠೇವಣಿಯಾಗಿ ಸಂಧಾನದಲ್ಲಿ ಆಯ್ಕೆಯಾದ ಕೂಡಲೇ ಡಿ.ಡಿ.ರೂಪದಲ್ಲಿ "Divisional Controller KSRTC Davanagere" ಇವರ ಹೆಸರಿನಲ್ಲಿ ಪಾವತಿಸುವುದು. ನಿಗದಿತ ಸಮಯಕ್ಕೆ ಭದ್ರತಾ ಠೇವಣಿ ಪಾವತಿಸದಿದ್ದ ಪಕ್ಷದಲ್ಲಿ ನಿಗಮಕ್ಕೆ ಪಾವತಿಸಿರುವ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
5. ಆಯ್ಕೆಗೊಂಡ ಪರವಾನಗಿದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಸರ್ಕಾರವು ನಿಗದಿಪಡಿಸುವ ಶೇ ಮೊತ್ತದ ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
6. ಪರವಾನಗಿದಾರರು ಪರವಾನಗಿ ಮೊತ್ತ ಹಾಗೂ ಇತರೆ ಶುಲ್ಕಗಳನ್ನು ಸತತ 02 ತಿಂಗಳು ಪಾವತಿಸದಿದ್ದಲ್ಲಿ ಒಪ್ಪಂದ ರದ್ಧತಿಯಾಗುತ್ತದೆ.
7. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು.
8. ಸಂಸ್ಥೆಯ ಮಾಸಿಕ ಪರವಾನಿಗೆ ಶುಲ್ಕ ಬಾಕಿ ಉಳಿಸಿಕೊಂಡಿರುವವರು ಮತ್ತು ಕರಾರು ನಿಯಮ ಉಲ್ಲಂಘಿಸಿ ನಿಗಮದಿಂದ ಕರಾರು ಒಪ್ಪಂದ ರದ್ದಾಗಿರುವವರು ಸಂಧಾನದಲ್ಲಿ ಭಾಗವಹಿಸಲು ಅರ್ಹರಲ್ಲ ಹಾಗೂ ಅರ್ಜಿ ಸಲ್ಲಿಸಿದಲ್ಲಿ ಇ.ಎಂ.ಡಿ ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
10. ಸಂಧಾನ ಪ್ರಕ್ರಿಯೆಯಲ್ಲಿ ಮಳಿಗೆಗೆ ಆಯ್ಕೆಯಾದ ಅರ್ಜಿದಾರರು ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕಡ್ಡಾಯವಾಗಿ ನೀಡುವುದು.
11. ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದೊಂದಿಗೆ ಸಂಬಂಧಪಟ್ಟ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.
12. ಆಯ್ಕೆಗೊಂಡ ಪರವಾನಗಿದಾರರು ಮಳಿಗೆಯನ್ನು ಸ್ವತ: ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.
13. ಆಯ್ಕೆಗೊಂಡ ಪರವಾನಗಿದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇ.ಎಂ.ಡಿ ಹಣವನ್ನು ಹಿಂತಿರುಗಿಸಲಾಗುವುದು. ವಾಸದ ದೃಢೀಕರಣ ಚಾಲನಾ ಪರವಾನಗಿ, ಆಧಾರ ಕಾರ್ಡ, ವೋಟರ್ ಕಾರ್ಡ, ರೇಷನ್ ಕಾರ್ಡ ಸಲ್ಲಿಸುವುದು.

14. ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು ಆ ತಿಂಗಳ 07 **ನೇ** ತಾರೀಖಿನೊಳಗೆ ಮತ್ತು ಸೇವಾ ತೆರಿಗೆಯನ್ನು ಆ ತಿಂಗಳ 05 **ನೇ** ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.
15. ಉಪಹಾರ ಗೃಹಗಳಲ್ಲಿ ಅಡುಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು.
16. ಮಳಿಗೆಗಳಲ್ಲಿ ಟೂರಿಸ್ಟ್/ಟ್ರಾವೆಲ್ ಏಜೆನ್ಸಿ, ಮದ್ಯಪಾನ, ಮಾಂಸ, ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರ ಮಾರಾಟ ವಸ್ತುಗಳನ್ನು, ಪಟಾಕಿ ಹಾಗೂ ಸ್ಫೋಟಕ ವಸ್ತುಗಳನ್ನು, ವಾಯು ಮಾಲಿನ್ಯ ಮಾಡುವ ವ್ಯಾಪಾರ ಹಾಗೂ ಸಂಸ್ಥೆಯ ಹಿತಕ್ಕೆ ಧಕ್ಕೆ ಬರುವ ವ್ಯಾಪಾರಗಳಿಗೆ ನಿಷೇಧಿಸಲಾಗಿದೆ.
17. ಮಳಿಗೆಗಳು ಹಾಗೂ ತೆರೆದ ಸ್ಥಳಗಳು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗುವುದು ಮತ್ತು ಸಂಧಾನದಲ್ಲಿ ನೀಡಿರುವ/ನಮೂದಿಸಿರುವ ಸ್ಥಳದಲ್ಲಿ ಮಾತ್ರ ವ್ಯವಹಾರ ನಡೆಸತಕ್ಕದ್ದು.
18. ಆಯ್ಕೆಗೊಂಡ ಪರವಾನಗಿದಾರರು ಕರ್ನಾಟಕ ಸರ್ಕಾರವು ಜಾರಿ ಮಾಡಿರುವ 1957 ರ ಗ್ರಾಹಕರ ಅಧಿನಿಯಮ-6/23(1) ನಿಯಮ 23(2) ರ ಅನ್ವಯ ಗ್ರಾಹಕರಿಗೆ ಮಳಿಗೆಯಲ್ಲಿ ಮಾರಾಟ ಮಾಡುವ ವಸ್ತುಗಳ ಮೇಲೆ ತಯಾರಕರು, ನಿರ್ದಿಷ್ಟ ಪಡೆಸಿದ ಗರಿಷ್ಠ ಬೆಲೆಗೆ ಮಾರಾಟ ಮಾಡಬೇಕಾಗಿರುತ್ತದೆ, ಗರಿಷ್ಠ ಬೆಲೆಯನ್ನು ಅಳಿಸುವುದು/ತಿದ್ದುವುದಾಗಲಿ ಇತ್ಯಾದಿಗಳು ದೂರು ಬಂದಲ್ಲಿ ನೀಡಲಾದ ಪರವಾನಗಿಯನ್ನು ರದ್ದುಪಡಿಸಲಾಗುವುದು.
19. ಆಯ್ಕೆಗೊಂಡ ಪರವಾನಗಿದಾರರು ನಿಗದಿತ ಸಮಯದೊಳಗೆ ಕರಾರು ಒಪ್ಪಂದ ಮಾಡಿಕೊಂಡು ವ್ಯಾಪಾರ ನಡೆಸದಿದ್ದಲ್ಲಿ ಅವರು ನೀಡಿರುವ ಇ.ಎಂ.ಡಿ ಮೊತ್ತವನ್ನು ಸಂಸ್ಥೆಗೆ ಆಗುವ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
20. ಬಾಲಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
21. ಆಯ್ಕೆಯಾದ ಅರ್ಜಿದಾರರೊಂದಿಗೆ ತೆರೆದ ಸ್ಥಳಕ್ಕೆ ಮೂರು (03) ವರ್ಷ, ಶಾಶ್ವತ ಮಳಿಗೆಗಳಿಗೆ ಐದು (05) ವರ್ಷ, ವಸತಿ ಗೃಹಗಳಿಗೆ (10) ವರ್ಷ ಮತ್ತು ಎ.ಟಿ.ಎಂ ಕೌಂಟರ್‌ಗಳಿಗೆ (05) ವರ್ಷ ಅವಧಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗುವುದು.
22. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 602/Dt:.04-06-2008 ಮತ್ತು 1023/Dt:30-03-2010 ರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಇರಿಸುವ ವಾಣಿಜ್ಯ ಮಳಿಗೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ತಾಲ್ಲೂಕು ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರ ದೃಢೀಕೃತ ಪ್ರತಿಯೊಂದಿಗೆ ಸಲ್ಲಿಸುವುದು ಹಾಗೂ ಆಯ್ಕೆಯಾದ ಅಭ್ಯರ್ಥಿಗಳು ಕರಾರು ಒಪ್ಪಂದ ಮಾಡಿಕೊಳ್ಳುವಾಗ ಎಲ್ಲಾ ಮೂಲ ದಾಖಲಾತಿ ಒದಗಿಸುವುದು.
23. ದೂರವಾಣಿ ಮಳಿಗೆ ಹಾಗೂ ನಾಣ್ಯ ಚಾಲಿತ ಮಾನವ ತೂಕದ ಯಂತ್ರಗಳಿಗೆ ಮಾಸಿಕ ಶುಲ್ಕವನ್ನು ಮಾತ್ರ ನಿಗಧಿಪಡಿಸಿದ್ದು, ವಿದ್ಯುಚ್ಛಕ್ತಿ ಶುಲ್ಕ ಕ್ರಮವಾಗಿ ತಾಲ್ಲೂಕು ಕೇಂದ್ರದಲ್ಲಿ ರೂ. 524/- ಮತ್ತು ಜಿಲ್ಲಾ ಕೇಂದ್ರದಲ್ಲಿ ರೂ. 616/- ಗಳನ್ನು ಆಯ್ಕೆಯಾದ ಪರವಾನಗಿದಾರರು ಮಾಸಿಕ ಶುಲ್ಕದ ಜೊತೆಗೆ ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ.
24. ದೂರವಾಣಿ ಬೂತ್/ಮಳಿಗೆಗಳನ್ನು ಶೇ. 100 % ರಷ್ಟು ಅಂಗವಿಲತೆ ಇರುವವರಿಗೆ ಮಾತ್ರ ನೀಡಲಾಗುವುದು.
25. ಅರ್ಜಿ ಸಲ್ಲಿಸುವ ಅರ್ಜಿದಾರರು ವಿಳಾಸ ದೃಢೀಕರಣ ಮೂಲಪ್ರತಿಯನ್ನು ಸಲ್ಲಿಸಬೇಕು.
26. ಸ್ಕೂಟರ್ ಮತ್ತು ಸೈಕಲ್ ನಿಲ್ದಾಣದ ಅವಧಿ ಮೂರು (03) ವರ್ಷದಾಗಿರುತ್ತದೆ. ಆಯ್ಕೆಯಾದ ಪರವಾನಗಿದಾರರು ನಿಗಮವು ನಿಗದಿಪಡಿಸಿದ ದರದಂತೆ ಶುಲ್ಕವನ್ನು ಪಡೆಯುವುದು ಹಾಗೂ ದ್ವಿಚಕ್ರ ಪಾರ್ಕಿಂಗ್‌ಗಳಿಗೆ ಆದಾಯ ತೆರಿಗೆ ಕಾಯ್ದೆ 1961 ರ ಸೆಕ್ಷನ್ 206 'ಸಿ' ನ ಪ್ರಕಾರ **ಟಿ.ಸಿ..ಎಸ್** ಮತ್ತು ಪರವಾನಗಿ ಶುಲ್ಕದ ಮೇಲೆ ಸರ್ಕಾರವು ನಿಗದಿಪಡಿಸುವ ಶೇ ಮೊತ್ತದ ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಪಾವತಿಸಲು ಬದ್ಧರಾಗಿರಬೇಕು.
27. ಸಂಧಾನವನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
28. ಎ.ಟಿ.ಎಂ ಗೆ ಶೆಡ್‌ನ್ನು ಸಂಬಂಧಿಸಿದ ಬ್ಯಾಂಕಿನವರೆ ಕಟ್ಟಿಕೊಳ್ಳುವುದು.
29. ವಾಣಿಜ್ಯ ಮಳಿಗೆಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಪ್ರಾರಂಭಿಸಲು ಕಾನೂನು ರೀತಿಯಲ್ಲಿ ಆಗತ್ಯವಿರುವ ಪರವಾನಗಿಯನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ಪರವಾನಗಿದಾರರು ಪಡೆದುಕೊಳ್ಳತಕ್ಕದ್ದು.